ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಎಲ್.ಎಲ್.ಬಿ., ಅಥವಾ ಬಿ.ಎಲ್ ಪದವಿ ಪಡೆದಂತಹ ಕಾನೂನು ಪದವೀಧರರಿಗೆ ಜನರಲ್ ಲಾ ಭಾಗ–1ರ ಪತ್ರಿಕೆ–(1) ಕ್ಕೂ ಮತ್ತು ಜನರಲ್ ಲಾ ಭಾಗ–2 ಕ್ಕೂ ಹಾಗೂ ಬಿ.ಕಾಂ. ಅಥವಾ ಐ.ಕಾಂ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಸಿಯಲ್ ಅಕೌಂಟೆನ್ಸಿ ವಿಷಯದಲ್ಲಿ ತೇರ್ಗಡೆಯಾದವರಿಗೆ ಕಮರ್ಷಿಯಲ್ ಟ್ಯಾಕ್ಸ್ ಹೈಯರ್ ವಿಷಯದ ಪತ್ರಿಕೆ–3ಕ್ಕೂ, ಕೋ–ಆಪರೇಷನ್ ವಿಷಯದ ಪತ್ರಿಕೆ–2ಕ್ಕೂ ಹಾಗೂ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಷಿಯಲ್ ಅಕೌಂಟೆನ್ಸಿ ಓದಿ ಬಿ.ಕಾಂ., ಬಿ.ಬಿ.ಎಂ. ಅಥವಾ ತತ್ಸಮಾನ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಕೋ–ಆಪರೇಟಿವ್ ಆಡಿಟ್ ಪರೀಕ್ಷೆಯ 2ನೇ ಪತ್ರಿಕೆಗೆ ವಿನಾಯಿತಿ ಇದೆ. ಹಾಗೆಯೇ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಷಿಯಲ್ ಅಕೌಂಟೆನ್ಸಿ ವಿಷಯವನ್ನು ಓದಿರುವ ಬಿ.ಕಾಂ. ಪದವೀಧರರಿಗೆ ಎಸ್. ಎ. ಎಸ್. ಭಾಗ–3ರ ಪತ್ರಿಕೆ–1 ಕ್ಕೂ ಹಾಗೂ ಟ್ರೆಜರಿ ಅಕೌಂಟ್ಸ್ ಭಾಗ–2ರ ಪತ್ರಿಕೆ–1ಕ್ಕೂ ವಿನಾಯಿತಿ ಇರುತ್ತದೆ. ವಿನಾಯಿತಿ ಕೋರುವ ಅಭ್ಯರ್ಥಿಗಳು ಈ ತತ್ಸಂಬಂಧ ವಿಷಯಗಳನ್ನು ಅಭ್ಯಸಿಸಿದ್ದ ಬಗ್ಗೆ ಬಿ.ಕಾಂ., ಎಲ್.ಎಲ್.ಬಿ. ಅಥವಾ ತತ್ಸಮಾನ ಪದವಿಯ ದೃಢೀಕೃತ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆಯೋಗದ ಕಛೇರಿಗೆ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಪ್ರತಿಯೊಂದಿಗೆ ರವಾನಿಸತಕ್ಕದ್ದು. ಆನ್‌ಲೈನ್ ಅರ್ಜಿಗೆ ಸಂಬಂಧಿಸಿದ ಅಂಕಣದಲ್ಲಿ ಅಭ್ಯರ್ಥಿಯು ಪಡೆದಿರುವ ಪದವಿಯ ಬಗ್ಗೆ ಕಡ್ಡಾಯವಾಗಿ ನಮೂದಿಸತಕ್ಕದ್ದು. ತಪ್ಪಿದಲ್ಲಿ ಅಂತಹ ವಿನಾಯಿತಿಗಳನ್ನು ಪರಿಗಣಿಸಲಾಗುವುದಿಲ್ಲ.

ಸೂಚನೆ:– ವಿನಾಯಿತಿಯನ್ನು ಕೋರುವ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭಗಳಲ್ಲಿ ಅಗತ್ಯ ಮಾಹಿತಿಗಳನ್ನು ನಿಗದಿತ ಅಂಕಣಗಳಲ್ಲಿ ನಮೂದಿಸುವುದು ಅತ್ಯವಶ್ಯಕ ಹಾಗೂ ವಿನಾಯಿತಿ ಕೋರಿ ಆಯೋಗಕ್ಕೆ ಒದಗಿಸಬೇಕಿರುವ ದೃಢೀಕೃತ ದಾಖಲೆಗಳ ಪ್ರತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಪ್ರತಿಯೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಮರುದಿನವೇ ರವಾನಿಸಿದಲ್ಲಿ ವಿನಾಯಿತಿಯನ್ನು ಪರಿಗಣಿಸಿ ಸದರಿ ಅಭ್ಯರ್ಥಿಗಳ ಫಲಿತಾಂಶವನ್ನು ಫಲಿತಾಂಶ ಪ್ರಕಟಣಾ ಸಂದರ್ಭದಲ್ಲೇ ಪ್ರಕಟಿಸಲಾಗುವುದು.

8. ಕನ್ನಡಭಾಷಾ ಲಿಖಿತ ಪರೀಕ್ಷೆಗೆ ಮೌಖಿಕ ಪರೀಕ್ಷೆ:

(1) ಕನ್ನಡ ಭಾಷಾ ವಿಷಯದ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮೌಖಿಕ ಪರೀಕ್ಷೆಯನ್ನು ಆಯೋಗದ ಕೇಂದ್ರಕಛೇರಿ, ಉದ್ಯೋಗ ಸೌಧ, ಬೆಂಗಳೂರು–560001 ಇಲ್ಲಿ ಹಾಗೂ ಆಯೋಗದ ಪ್ರಾಂತೀಯ ಕಛೇರಿಗಳಾದ ಬೆಳಗಾಂ, ಗುಲ್ಬರ್ಗಾ, ಮೈಸೂರು ಹಾಗೂ ಶಿವಮೊಗ್ಗ ಕೇಂದ್ರಗಳಲ್ಲಿ ನಡೆಸಲಾಗುವುದು. ಆಯೋಗದ ವಿವೇಚನೆಯಂತೆ ಅನಿವಾರ್ಯ ಸಂದರ್ಭಗಳಲ್ಲಿ ರಾಜ್ಯದ ಇತರ ಜಿಲ್ಲಾ ಕೇಂದ್ರಗಳಲ್ಲಿ ಮೌಖಿಕ ಪರೀಕ್ಷೆಯನ್ನು ನಡೆಸಲಾಗುವುದು .

ಸೂಚನೆ : ಯಾವುದೇ ಸರ್ಕಾರಿ ನೌಕರನು/ನೌಕರಳು ಕನ್ನಡಭಾಷಾ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಹೊರತು ಕನ್ನಡ ಮೌಖಿಕ ಪರೀಕ್ಷೆಗೆ ಅರ್ಹರಾಗುವುದಿಲ್ಲ.

ಆದರೆ

(1) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 81 ಎಸ್‌ಎಸ್‌ಆರ್ 81, ದಿನಾಂಕ 6ನೇ ಜೂನ್ 1981ರ ಮೇರೆಗೆ ಗೃಹರಕ್ಷಕ ಸಂಸ್ಥೆಯ ಸೈನಿಕರು ಕನ್ನಡ ಭಾಷಾ, ಮೌಖಿಕ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆಯಾಗತಕ್ಕದ್ದು. ವೇತನ ಮುಂಬಡ್ತಿ ಪಡೆಯುವ ಮತ್ತು ಸೇವಾ ಸ್ಥಿರೀಕರಣದ ಉದ್ದೇಶಗಳಿಗೆ ಕನ್ನಡ ಭಾಷಾ ಲಿಖಿತ ಪರೀಕ್ಷೆಯ ಬದಲಾಗಿ ಗರಿಷ್ಠ 50 ಅಂಕಗಳನ್ನು ನಿಗದಿಪಡಿಸಿರುವ ಕನ್ನಡ ಮೌಖಿಕ ಪರೀಕ್ಷೆಯಲ್ಲಿ ಮಾತ್ರ ಅವರು ತೇರ್ಗಡೆ ಹೊಂದಬೇಕಾಗಿರುತ್ತದೆ.

(2) ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಎಸ್‌ಆರ್ 82, ದಿನಾಂಕ 30ನೇ ಆಗಸ್ಟ್ 1982ರ ಮೇರೆಗೆ ಅಂಧರಾಗಿರುವ ಮತ್ತು ಕೆಲಸಕ್ಕೆ ಓದುವುದು ಮತ್ತು ಬರೆಯುವುದು ಅವಶ್ಯವಿಲ್ಲದ ಸರ್ಕಾರಿ ನೌಕರರಿಗೆ ಸ್ಥಿರೀಕರಣದ ಮತ್ತು ವಾರ್ಷಿಕ ವೇತನ ಮುಂಬಡ್ತಿಗಳನ್ನು ಪಡೆಯುವ ಉದ್ದೇಶಗಳಿಗಾಗಿ ಕನ್ನಡ ಭಾಷಾ ಲಿಖಿತ ಸೇವಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿಸಲಾಗಿದೆ. ಆದರೆ ಅವರು ಕನ್ನಡ ಭಾಷಾ ಮೌಖಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು.

(3) ಸರ್ಕಾರದ ಆದೇಶ ಸಂಖ್ಯೆ.ಸಿಆಸುಇ 26 ಸೆಸೆನಿ 94, ಬೆಂಗಳೂರು, ದಿನಾಂಕ:14–07–1994ರಲ್ಲಿ ಸೂಚಿಸಿರುವ ಕಂಪೋಜಿಟರ್, ಸೀನಿಯರ್ ಕಂಪೋಜಿಟರ್, ಸೀನಿಯರ್ ಮಷಿನ್ ಮೈಂಡರ್, ಸೀನಿಯರ್ ಬೈಂಡರ್, ಸಹಾಯಕ ಪ್ರೊಸೆಸ್ ಅಪರೇಟರ್, ಆಫ್‌ಸೆಟ್ ಪ್ರಿಂಟರ್, ಅಫ್‌ಸೆಟ್ ಪ್ಲೇಟ್ ಮೇಕರ್ ಹಾಗೂ ವೈರ್‌ಮನ್ ಈ ಪದನಾಮವನ್ನು ಹೊಂದಿರುವ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಸಿಬ್ಬಂದಿ ವರ್ಗದವರು ಮುಂಬಡ್ತಿ ಪಡೆಯಲು ಕನ್ನಡಭಾಷಾ ಪರೀಕ್ಷೆಯ ಲಿಖಿತ ಪರೀಕ್ಷೆ (ಪೇಪರ್ 1 ಮತ್ತು 2) ಯಿಂದ ವಿನಾಯಿತಿ ಹೊಂದಿರುತ್ತಾರೆ. ಆದರೆ ಮೌಖಿಕ ಪರೀಕ್ಷೆಯಲ್ಲಿ ಶೇಕಡ 40ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಬೇಕಾಗಿರುತ್ತದೆ.

9. ಕನ್ನಡ ಭಾಷಾ ಪಠ್ಯ ಕ್ರಮ:

ಅಖಿಲ ಭಾರತ ಸೇವಾ ಅಧಿಕಾರಿಗಳಿಗೆ ಕನ್ನಡಭಾಷಾ ವಿಷಯದ (ಸಂಕೇತ–72) ಇಲಾಖಾ ಪರೀಕ್ಷೆಯ ಅಭ್ಯರ್ಥಿಗಳಿಗೆ ಸರ್ಕಾರವು ತನ್ನ ಆದೇಶ ಸಂಖ್ಯೆ:ಡಿಪಿಎಆರ್168 ಎಸ್‌ಎಂಇ 94, ದಿನಾಂಕ:12–07–1995ರ ಪ್ರಕಾರ 10ನೇ ತರಗತಿಯ ಕನ್ನಡ ದ್ವಿತೀಯ ಹಾಗೂ ತೃತೀಯ ಭಾಷಾಪುಸ್ತಕ "ತಿಳಿಗನ್ನಡ–6" ಎಂಬ ಪುಸ್ತಕವನ್ನು ನಿಗದಿ ಪಡಿಸಲಾಗಿದೆ.

ಅಖಿಲ ಭಾರತ ಸೇವಾ ಅಧಿಕಾರಿಗಳನ್ನು ಹೊರತು ಪಡಿಸಿ ಕನ್ನಡ ಭಾಷಾ ವಿಷಯದ(ಸಂಕೇತ–47) ಇಲಾಖಾ ಪರೀಕ್ಷೆ ಇತರ ಅಭ್ಯರ್ಥಿಗಳಿಗೆ:

(ಅ) ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿ ಇವರಿಂದ ಪ್ರಕಾಶನಗೊಂಡಿರುವ ವಿವಿಧ ಲೇಖಕರಿಂದ ರಚಿತವಾದ **"ಸತ್ಯಕ್ಕೆ ಬೆಲೆಕೊಟ್ಟ ಗೆಳೆಯರು"** ಪಾಠದಿಂದ ಪ್ರಾರಂಭಗೊಳ್ಳುವ **"ಸಣ್ಣ ಕಥೆಗಳು"**

ಮತ್ತು

(ಆ) ಆರನೆಯ ತರಗತಿಯ ಪಠ್ಯ ಪುಸ್ತಕವಾದ **"ಕನ್ನಡ ಕಸ್ತೂರಿ"**ಯನ್ನು ನಿಗದಿಪಡಿಸಲಾಗಿದೆ.

10. ಪ್ರವೇಶ ಪತ್ರ:

ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುತ್ತಿರುವುದರಿಂದ ಪ್ರವೇಶಪತ್ರಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ.

ವೇಳಾ ಪಟ್ಟಿಯನ್ನೊಳಗೊಂಡ ಪ್ರವೇಶಪತ್ರವನ್ನು ಪರೀಕ್ಷೆಗೆ ಮೊದಲು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗುತ್ತದೆ. ಅಭ್ಯರ್ಥಿಗಳು ಪ್ರವೇಶಪತ್ರಗಳನ್ನು **Down load** ಮಾಡಿಕೊಂಡು ಮೇಲಧಿಕಾರಿಗಳ ದೃಢೀಕರಣದೊಂದಿಗೆ ನಿಗದಿತ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾವೇಳೆಯಲ್ಲಿ ಪ್ರವೇಶಪತ್ರವನ್ನು ಹಾಜರುಪಡಿಸತಕ್ಕದ್ದು. ಸದರಿ ಪ್ರವೇಶ ಪತ್ರಗಳನ್ನು ಅಭ್ಯರ್ಥಿಗಳು ಜೋಪಾನವಾಗಿಟ್ಟಿರಬೇಕು ಮತ್ತು ಅವುಗಳನ್ನು ತಮ್ಮ ಸೇವಾ ದಾಖಲೆಗಳಲ್ಲಿ ನಮೂದು ಮಾಡುವುದಕ್ಕಾಗಿ ಆಯೋಗದಿಂದ ನೀಡಲಾದ ತೇರ್ಗಡೆ ಪ್ರಮಾಣ ಪತ್ರದೊಂದಿಗೆ ಸಕ್ಷಮ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಪರೀಕ್ಷೆಗಳು ಮುಗಿದ ನಂತರ ಪ್ರವೇಶ ಪತ್ರದ ನಕಲನ್ನು ನೀಡಲಾಗುವುದಿಲ್ಲ.

ಸೂಚನೆ:–ಆಯೋಗದ ವೆಬ್‌ಸೈಟ್‌ನಿಂದ Down load ಮಾಡಿಕೊಂಡ ಪ್ರವೇಶಪತ್ರದಲ್ಲಿ ಹೆಸರು, ಪದನಾಮ, ವಿಳಾಸ ಇತ್ಯಾದಿ ವಿವರಗಳು ತಪ್ಪಾಗಿ ಕಂಡುಬಂದಲ್ಲಿ ತಕ್ಷಣ ಅವುಗಳನ್ನು ತಿದ್ದುಪಡಿ ಮಾಡುವಂತೆ ಕೋರಿ ಪ್ರವೇಶಪತ್ರದ ಜೆರಾಕ್ಸ್ ಪ್ರತಿಯೊಂದಿಗೆ ತಿದ್ದುಪಡಿಗೆ ಅಗತ್ಯವಿರುವ ದಾಖಲೆ/ಮಾಹಿತಿಗಳನ್ನು ಮೇಲಧಿಕಾರಿಗಳಿಂದ ದೃಢೀಕರಿಸಿ ಆಯೋಗಕ್ಕೆ ಮನವಿಯನ್ನು ಸಲ್ಲಿಸಿದಲ್ಲಿ ಪ್ರಮಾಣಪತ್ರವನ್ನು ಮುದ್ರಿಸುವ ಮುನ್ನ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಪ್ರಮಾಣಪತ್ರವನ್ನು ಒದಗಿಸಲಾಗುವುದು.

11. ಪಠ್ಯಪುಸ್ತಕಗಳು:

ಪಠ್ಯಪುಸ್ತಕಗಳನ್ನು ಉಪಯೋಗಿಸಿ ಪರೀಕ್ಷೆ ಬರೆಯಬಹುದಾದ ಪತ್ರಿಕೆಗಳಿಗೆ ಅಭ್ಯರ್ಥಿಗಳು ಸರ್ಕಾರದಿಂದ ಪ್ರಕಾಶಿಸಲ್ಪಟ್ಟ ಪಠ್ಯಪುಸ್ತಕಗಳನ್ನು ಮತ್ತು ಖಾಸಗಿ ಪ್ರಕಾಶಕರಿಂದ ಪ್ರಕಾಶಿಸಲ್ಪಟ್ಟ ಪುಸ್ತಕಗಳನ್ನು ಸರ್ಕಾರಿ ಪ್ರಕಾಶಿತ ಪುಸ್ತಕಗಳ ಮಾದರಿಗೆ ಯಾವುದೇ ರೀತಿಯ ತದ್ವಿರುದ್ಧವಾಗಿಲ್ಲದಿದ್ದರೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 3ನೇ ಡಿಸೆಂಬರ್ 1991ರ ಆದೇಶಕ್ಕೆ ಅನುಗುಣವಾಗಿದ್ದರೆ ಅಂತಹ ಪಠ್ಯ ಪುಸ್ತಕಗಳನ್ನು ಮಾತ್ರ ಪರೀಕ್ಷಾ ಕೇಂದ್ರಗಳಲ್ಲಿ ಉಪಯೋಗಿಸಬಹುದಾಗಿರುತ್ತದೆ. ಇತರೇ ಯಾವುದೇ ಖಾಸಗಿ ಪ್ರಕಾಶಕರ ಗೈಡ್‌ಗಳನ್ನು ನಿಷೇಧಿಸಲಾಗಿದೆ.

12. ತೇರ್ಗಡೆಗೆ ಗಳಿಸಬೇಕಾದ ಅಂಕಗಳು:

ಎ) ಯಾವುದೇ ಸೇವಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಒಂದು ಪತ್ರಿಕೆಯನ್ನು ಒಳಗೊಂಡ ವಿಷಯವಾಗಿದ್ದಲ್ಲಿ ಸದರಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡ 40 ಅಂಕಗಳನ್ನು ಪಡೆದಿರಬೇಕು. ಒಂದಕ್ಕಿಂತ ಹೆಚ್ಚು ಪತ್ರಿಕೆಗಳಿದ್ದಲ್ಲಿ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡಾ 35 ಮತ್ತು ಒಟ್ಟು ಎಲ್ಲಾ ಪತ್ರಿಕೆಗಳಿಂದ ಕನಿಷ್ಠ ಶೇಕಡಾ 40 ಅಂಕಗಳನ್ನು ಪಡೆದಿರಬೇಕು. ವಿನಾಯಿತಿ ಕೋರಿದ ಬಿ.ಕಾಂ., ಬಿ.ಬಿ.ಎಂ., ಹಾಗೂ ಕಾನೂನು ಪದವೀಧರರು, ಹಾಜರಾಗುವ ವಿಷಯದ ಪ್ರತಿ ಪತ್ರಿಕೆಗಳಲ್ಲಿ ಕನಿಷ್ಠ ಶೇಕಡ 35 ಅಂಕಗಳನ್ನು ಹಾಗೂ ಪ್ರತಿ ವಿಷಯದ ಎಲ್ಲಾ ಪತ್ರಿಕೆಗಳ ಸರಾಸರಿ 40 ಅಂಕಗಳನ್ನು ಗಳಿಸಿರಬೇಕು.

ಬಿ) ಯಾವುದೇ ಪರೀಕ್ಷೆಯಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ಶೇಕಡ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾದಂತಹ ಅಭ್ಯರ್ಥಿಗಳನ್ನು ಪ್ರಥಮ ದರ್ಜೆ ಯಲ್ಲಿ ಉತ್ತೀರ್ಣರಾಗಿರುವುದಾಗಿ ಫಲಿತಾಂಶ ಘೋಷಿಸಲಾಗುವುದು.

13. ಹಾಜರಿ ಪ್ರಮಾಣ ಪತ್ರಗಳು:

ಪರೀಕ್ಷೆಗೆ ಹಾಜರಾದ ಬಗ್ಗೆ ಹಾಜರಾತಿ ಪ್ರಮಾಣಪತ್ರ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪರೀಕ್ಷಾಕೇಂದ್ರದ ಮೇಲ್ವಿಚಾರಕರಿಂದ ಅದನ್ನು ಪರೀಕ್ಷಾ ದಿನದಂದೇ ಪಡೆಯತಕ್ಕದ್ದು. ಹಾಜರಿ ಪ್ರಮಾಣಪತ್ರವನ್ನು ಆಯೋಗದ ಕಛೇರಿಯಿಂದ ಯಾವುದೇ ಸಂದರ್ಭದಲ್ಲೂ ನೀಡಲಾಗುವುದಿಲ್ಲ.

14. ತೇರ್ಗಡೆ ಪ್ರಮಾಣ ಪತ್ರಗಳು:

ಪ್ರತಿಯೊಂದು ವಿಷಯಕ್ಕೆ ತೇರ್ಗಡೆ ಪ್ರಮಾಣಪತ್ರವನ್ನು ಆಯೋಗದಿಂದ ಫಲಿತಾಂಶವು ಅಧಿಕೃತವಾಗಿ ರಾಜ್ಯಪತ್ರದಲ್ಲಿ ಪ್ರಕಟವಾದ ನಂತರ ಅಭ್ಯರ್ಥಿಗಳಿಗೆ ಕಳುಹಿಸಲಾಗುವುದು. ಪ್ರಮಾಣ ಪತ್ರದಲ್ಲಿ ಮುದ್ರಿತವಾದ ಹೆಸರು ಅಥವಾ ಇನ್ನಾವುದೇ ರೀತಿಯ ತಪ್ಪುಗಳು ಕಂಡುಬಂದಲ್ಲಿ ಅಭ್ಯರ್ಥಿಗಳು ಕೂಡಲೇ ತಿದ್ದುಪಡಿಗಾಗಿ ಸೂಕ್ತ ದಾಖಲೆಗಳೊಂದಿಗೆ ಆಯೋಗದ ಕಛೇರಿಯನ್ನು ಸಂಪರ್ಕಿಸುವುದು.

(**ಸೂಚನೆ:** ಪರೀಕ್ಷೆಯ ಪ್ರತಿಭಾಗವನ್ನು ಈ ಉದ್ದೇಶಕ್ಕೆ ಒಂದು ಪ್ರತ್ಯೇಕ ಪರೀಕ್ಷೆ ಎಂದು ಪರಿಗಣಿಸಲಾಗುವುದು)

ಇಲಾಖಾ ಪರೀಕ್ಷೆಯ ಎಲ್ಲಾ ಅಭ್ಯರ್ಥಿಗಳ ಅಂಕಗಳನ್ನು ಆಯೋಗದ ವೆಬ್ ಸೈಟ್ **http://kpsc.kar.nic.in** ನಲ್ಲಿ ಫಲಿತಾಂಶ ಪ್ರಕಟವಾದ ದಿನಾಂಕದಂದೇ ಪ್ರಕಟಿಸಲಾಗುವುದು ಪ್ರತ್ಯೇಕವಾಗಿ ಅಂಕಪಟ್ಟಿಗಳನ್ನು ನೀಡಲಾಗುವುದಿಲ್ಲ.

15. ಅಂಕಗಳ ಮರು ಎಣಿಕೆ:

(ಎ) ಯಾವುದೇ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ಅಭ್ಯರ್ಥಿಯು ಫಲಿತಾಂಶ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗಾಗಿ ಸದರಿ ಪರೀಕ್ಷೆಯ ಎಲ್ಲಾ ಪತ್ರಿಕೆಗಳ ಅಥವಾ ಯಾವುದೇ ಪತ್ರಿಕೆಯ ಅಂಕಗಳ ಮರುಎಣಿಕೆಗಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದು, ಅಂತಹ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯು **ಪ್ರತಿ** ವಿಷಯಕ್ಕೆ **ರೂ. 100/–** ಗಳನ್ನು **"ಕಾರ್ಯದರ್ಶಿ ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು",** ಇವರಿಗೆ ಸಂದಾಯವಾಗುವಂತೆ ಪಡೆದ ಡಿಡಿ/ಐಪಿಓ ಮೂಲಕ ಸಂದಾಯ ಮಾಡತಕ್ಕದ್ದು ಹಾಗೂ ಅದನ್ನು ತನ್ನ ಹೆಸರು, ಪರೀಕ್ಷಾ ಕೇಂದ್ರ, ನೋಂದಣಿ ಸಂಖ್ಯೆ ಮತ್ತು ಮರು ಎಣಿಕೆ ಮಾಡಬೇಕಾದ ವಿಷಯದ ವಿವರಗಳನ್ನು ನಮೂದಿಸಿದ ಅರ್ಜಿಯೊಂದಿಗೆ ಲಗತ್ತಿಸಿ ಒದಗಿಸತಕ್ಕದ್ದು.

(ಬಿ) ಅಭ್ಯರ್ಥಿಯು ಪಡೆದ ಅಂಕಗಳ ಮರು ಎಣಿಕೆಯ ಸಂಬಂಧದಲ್ಲಿ ಆಯೋಗದ ನಿರ್ಣಯವೇ ಅಂತಿಮವಾಗಿರುತ್ತದೆ.

16. ಅನುಲೇಖನ ಸಹಾಯ:

ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್‌ಎಸ್‌ಸಿ 75, ದಿನಾಂಕ 5ನೇ ಜುಲೈ 1978ರ ಅನುಸಾರವಾಗಿ ಅಂಧರಾಗಿರುವ ಅಥವಾ ತನ್ನ ಸ್ವಂತ ಕೈಯಿಂದ ಬರೆಯಲು ಅಸಮರ್ಥರಾದ ಅಭ್ಯರ್ಥಿಗಳಿಗೆ ಈ ಮುಂದಿನ ಷರತ್ತುಗಳಿಗೊಳಪಟ್ಟು ಒಬ್ಬ ಅನುಲೇಖಕನ ಸಹಾಯವನ್ನು ಪಡೆಯುವುದಕ್ಕೆ ಅನುಮತಿಸಲಾಗಿದೆ:

1. ಅನುಲೇಖಕನ ಸಹಾಯವನ್ನು ಬಯಸುವ ಅಭ್ಯರ್ಥಿಯು ಅರ್ಜಿಯ ಜೊತೆಗೆ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ನೀಡಲಾದ ಒಂದು ಪ್ರಮಾಣ ಪತ್ರದೊಂದಿಗೆ ಅವನ ಮೇಲಧಿಕಾರಿಯ ಮೂಲಕ ಕಳುಹಿಸತಕ್ಕದ್ದು.
2. ಮೇಲಧಿಕಾರಿಯು ವೈದ್ಯಕೀಯ ಪ್ರಮಾಣಪತ್ರವನ್ನು ಆಯೋಗಕ್ಕೆ ಕಳುಹಿಸುವ ಮೊದಲು ಅಭ್ಯರ್ಥಿಯು ನಿಜವಾಗಿ ಅಸಮರ್ಥನಾಗಿರುವನೆ ಮತ್ತು ಅವನಿಗೆ ಅನುಲೇಖಕನ ಸಹಾಯ ಅವಶ್ಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
3. ಆಯೋಗವು ಅನುಲೇಖಕನ ಸಹಾಯಕ್ಕೆ ಮಂಜೂರಾತಿ ನೀಡಿದಾಗ ಸಂಬಂಧಪಟ್ಟ ಕೇಂದ್ರದ ಮೇಲ್ವಿಚಾರಕರು ಅಭ್ಯರ್ಥಿಗೆ ಒಬ್ಬ ಅನುಲೇಖಕನನ್ನು ನೇಮಕ ಮಾಡತಕ್ಕದ್ದು ಮತ್ತು ಅದನ್ನು ಕಾರ್ಯದರ್ಶಿ ಮತ್ತು ಇಲಾಖಾ ಪರೀಕ್ಷೆಯ ನಿಯಂತ್ರಣಾಧಿಕಾರಿಗೆ ತಿಳಿಸತಕ್ಕದ್ದು.

4. ಹಾಗೆ ನೇಮಕ ಮಾಡಲಾದ ಅನುಲೇಖಕನು ಅಭ್ಯರ್ಥಿಗಿಂತ ಕೆಳಗಿನ ದರ್ಜೆಯವನು ಅಥವಾ ಕಡಿಮೆ ಶಿಕ್ಷಣ ಪಡೆದವನು ಆಗಿರತಕ್ಕದ್ದು ಮತ್ತು ಅವನು ಅಭ್ಯರ್ಥಿಯ ಸಂಬಂಧಿಕನಾಗಿರಬಾರದು.

5. ಅಭ್ಯರ್ಥಿಗಳು ಪರೀಕ್ಷೆಯ ಪ್ರತಿಯೊಂದು ಪತ್ರಿಕೆಗೆ ರೂ. 5/–(ಐದು ರೂಪಾಯಿಗಳು) ಮೊತ್ತವನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊತ್ತವನ್ನು ಪರೀಕ್ಷೆಯ ಪತ್ರಿಕೆ ಮುಗಿದ ಕೂಡಲೇ ಅನುಲೇಖಕನಿಗೆ ಸಂದಾಯ ಮಾಡತಕ್ಕದ್ದು.

6. ಅನುಲೇಖಕನನ್ನು ನೇಮಕ ಮಾಡಲಾಗಿದ್ದರೆ ಅಂತಹ ಅಭ್ಯರ್ಥಿಗೆ ಹದಿನೈದು ನಿಮಿಷಗಳ ಹೆಚ್ಚಿನ ಕಾಲಾವಕಾಶವನ್ನು ನೀಡಲಾಗುವುದು.

7. ಅನುಲೇಖಕನ ಸಹಾಯ ಬಯಸುವ ಅಭ್ಯರ್ಥಿಗಳು ಅವಶ್ಯಕ ವೈದ್ಯಕೀಯ ಪ್ರಮಾಣ ಪತ್ರ ಮತ್ತು ಮೇಲಧಿಕಾರಿಗಳ ದೃಢೀಕರಣವನ್ನು ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಪ್ರತಿಯೊಂದಿಗೆ ಲಗತ್ತಿಸಿ ನಿಗದಿಪಡಿಸಿದ ಕಡೇ ದಿನಾಂಕದೊಳಗೆ ಆಯೋಗಕ್ಕೆ ಮನವಿಯನ್ನು ಸಲ್ಲಿಸತಕ್ಕದ್ದು. ಅನಿವಾರ್ಯ ಹಾಗೂ ಸಕಾರಣವಿಲ್ಲದ ಹೊರತು ಇತರ ಯಾವುದೇ ಸಂದರ್ಭಗಳಲ್ಲೂ ನಿಗದಿಪಡಿಸಲಾದ ಕಡೆಯ ದಿನಾಂಕದ ನಂತರ ಸಲ್ಲಿಸುವ ಇಂತಹ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.

8. ಅಭ್ಯರ್ಥಿಗಳು ಅನುಲೇಖಕನ ಸಹಾಯ ಕೋರಿ ಸಲ್ಲಿಸುವ ವೈದ್ಯಕೀಯ ಪ್ರಮಾಣ ಪತ್ರವನ್ನು ಅನುಮಾನಾಸ್ಪದ ಸಂದರ್ಭದಲ್ಲಿ ವೈದ್ಯಕೀಯ ಮಂಡಳಿಗೆ ಪರಿಶೀಲನೆಗಾಗಿ ಕಳುಹಿಸಲಾಗುವುದು, ಹಾಗೂ ಕೆಲವೊಂದು ಸಂದರ್ಭಗಳಲ್ಲಿ ಅವಶ್ಯಕವೆನಿಸಿದರೆ ಅಂತಹವರನ್ನು ವೈದ್ಯಕೀಯ ಪರಿಶೀಲನೆಗೂ ಗುರಿಪಡಿಸಲಾಗುವುದು. ಸುಳ್ಳು ಪ್ರಮಾಣಪತ್ರ ಹಾಜರುಪಡಿಸಿದ್ದು ಸಾಬೀತಾದ ಸಂದರ್ಭಗಳಲ್ಲಿ ಅಂತಹ ಅಭ್ಯರ್ಥಿಗಳ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದಲ್ಲದೆ ಅಂತಹವರ ಇಲಾಖಾ ಪರೀಕ್ಷೆಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

17. ನಕಲು ಪ್ರಮಾಣ ಪತ್ರ:

ಅಭ್ಯರ್ಥಿಯು ವಿವಿಧ ವಿಷಯಗಳಲ್ಲಿ ಉತ್ತೀರ್ಣಗೊಂಡ ಬಗ್ಗೆ ಆಯೋಗದಿಂದ ಪಡೆಯಲಾದ ಮೂಲ ಪ್ರಮಾಣಪತ್ರವನ್ನು ಕಳೆದುಕೊಂಡಲ್ಲಿ ಅಂತಹ ಅಭ್ಯರ್ಥಿಗಳು ನಕಲು ಪ್ರಮಾಣಪತ್ರವನ್ನು ಪಡೆದುಕೊಳ್ಳಬಹುದಾಗಿದ್ದು, ಸದರಿ ಪ್ರಮಾಣಪತ್ರಕ್ಕಾಗಿ ಈ ಕೆಳಗೆ ಸೂಚಿಸಿರುವ ಮಾಹಿತಿ/ದಾಖಲೆಗಳನ್ನು ಆಯೋಗಕ್ಕೆ ಒದಗಿಸುವ ಅಗತ್ಯವಿರುತ್ತದೆ.

(1) ನಕಲು ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಲು ಕಾರಣಗಳನ್ನು ತಿಳಿಸುವ ಹಾಗೂ ಪರೀಕ್ಷಾ ವಿವರಗಳನ್ನೊಳಗೊಂಡ ರೂ. 20/– ಮೌಲ್ಯದ ಛಾಪ ಕಾಗದದ ಮೇಲೆ ನೋಟರಿಯವರ ಮುಂದೆ ಪ್ರಮಾಣೀಕರಿಸಲಾದ ಅಫಿಡವಿಟ್‌ನ ಮೂಲ ಪ್ರತಿ ಹಾಗೂ;

(2) ಪ್ರತಿ ವಿಷಯ ಒಂದಕ್ಕೆ 100–00 ರೂ. ನಂತೆ ಶುಲ್ಕವನ್ನು ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು, ಇವರಿಗೆ ಸಂದಾಯವಾಗುವಂತೆ ಬ್ಯಾಂಕ್ ಡಿ.ಡಿ./ಅಂಚೆ ಧನಾದೇಶ.

(3) ಪ್ರವೇಶಪತ್ರದ ನೆರಳಚ್ಚು ಪ್ರತಿ ಮತ್ತು

(4) ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ಬಗ್ಗೆ ವಿವರಗಳನ್ನು ನಮೂದಿಸಿರುವ ಸೇವಾ ಪುಸ್ತಕದ ಉಧೃತ ಭಾಗದ ನೆರಳಚ್ಚುಪ್ರತಿ.

18. ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಇತ್ತೀಚೆಗೆ ಜಾರಿಗೊಂಡಿರುವ ಸರ್ಕಾರಿ ಆದೇಶಗಳು:

(1) Karnataka Civil Services (Service and Kannada Language Examinations) Rules, 1974

(1) A Government servant who has passed-

(a) the Secondary School Leaving Certificate Examination or any examination declared as equivalent thereto by the State Government, or any examination higher than the Secondary School Leaving Certificate Examination,

(i) in which the question papers on different subjects are answered in Kannada Language; or

(ii) in which Kannada is the main language, Second Language or an optional subject, but not one of the subject in a composite paper ,or

(aa) Diploma Course/Certificate Course in Kannada conducted by a University established by Law in India, or " Kava", " Jana" or "Rathna" examinations conducted by Kannada Sahitya Parishat.

(ab) Correspondence course in Kannada conducted by the Central Institute of Indian Languages, Mysore.

(2) ಸರ್ಕಾರಿ ಅಧಿಸೂಚನೆ ಸಂಖ್ಯೆ. ಸಿಆಸುಇ 3 ಸೆಸೆನಿ 2010, ಬೆಂಗಳೂರು, ದಿನಾಂಕ:02–02–2011.

"(ಎಸಿ) ಕರ್ನಾಟಕ ಸಿವಿಲ್ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ರಲ್ಲಿ ನಿಗದಿಪಡಿಸಿರುವಂತೆ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇಮಕಾತಿಗೆ, ಆಯ್ಕೆ ಪರೀಕ್ಷೆಯ ಒಂದು ಭಾಗವಾಗಿ ಲೋಕಸೇವಾ ಆಯೋಗ ಅಥವಾ ಇತರೆ ಯಾವುದೇ ಆಯ್ಕೆ ಪ್ರಾಧಿಕಾರ ನಡೆಸುವ ಕನ್ನಡಭಾಷಾ ಪರೀಕ್ಷೆ".

(3) (b) any examination specified in Schedule III as equivalent to the Kannada Language Examination, or who has won a prize in Kannada essay competition conducted by any University established by law, shall on obtaining a certificate of exemption under sub-rule (5) be deemed to have passed the Kannada Language Examination under these rules.

(4) ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 76, ದಿನಾಂಕ 10ನೇ ಜನವರಿ 1987ರ ಅನುಸಾರವಾಗಿ ಸರ್ಕಾರಿ ಆದೇಶ ಸಂಖ್ಯೆ 649 ಇಎನ್‌ಟಿ 57, ದಿನಾಂಕ 23ನೇ/25ನೇ ಫೆಬ್ರವರಿ 1959ರ ಅನುಸಾರವಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ನಡೆಸಲಾದ ಅರಣ್ಯ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಅರಣ್ಯ ಪರೀಕ್ಷೆಯ ಪತ್ರಿಕೆ–2 ರಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿ ನೀಡಲಾಗಿದೆ.

(5) ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 6 ಎಸ್‌ಎಸ್‌ಆರ್ 2009 ದಿನಾಂಕ 16–11–2010ರ

16.A. Karnataka Panchayat Raj Engineering Services	Executive Engineer, Assistant Executive Engineer, Assistant Engineer, Registrar	(1) Accounts Higher (2) PWD Higher Part-I and Part-II (3) General Law Part-I and Part-II (4) Community Development Part-I and Part-II
	Senior Geologist/ Geologist	(1) Accounts Higher (2) PWD Higher Part-I and Part-II (3) General Law Part-I and Part-II (4) Mining Part-I and Part-II (5) Community Development Part-I and Part-II
	Superintendent/ Stores Superintendent	(1) Accounts Hiher (2) PWD Higher Part-I and Part-II (3) General Law Part-I and Part-II (4) Community Development Part-I and Part-II
	Accounts Superintendent	(1) Accounts Higher (2) PWD Higher Part-I and Part-II (3) General Law Part-I (4) S.A.S. Part-I, Part-II and Part-III (5) Community Development Part-I and Part-II
	Junior Engineer/ First Division Assistant/First Division Store Keeper	(1) Accounts Higher (2) PWD Higher Part-I and Part-II (3) Community Development Part-I and Part-II
	First Division Accounts Assistant/Computer Assistant - cum - Office Assistant Grade-1	(1) Accounts Higher (2) PWD Higher Part-I and Part-II (3) General Law Part-I and Part-II (4) Community Development Part-I and Part-II
	Second Division Assistant/Second Division Accounts Assistant/Second Division Store Keeper/Godown Clerk/Computer Assistant Grade-II.	(1) Accounts Lower (2) PWD Lower Part-I and Part-II (3) Community Development Part-I and Part-II

(6) ಸರ್ಕಾರಿ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 4 ಎಸ್‌ಎಸ್‌ಆರ್ 2009 ದಿನಾಂಕ:23–12–2011ರನ್ವಯ ಪಂಚಾಯತ್‌ರಾಜ್ ಅಭಿವೃದ್ಧಿ ಇಲಾಖೆಯಲ್ಲಿನ ವಿವಿಧ ವೃಂದಗಳಲ್ಲಿನ ಹುದ್ದೆಗಳಿಗೆ ಈ ಕೆಳಕಂಡಂತೆ ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಲಾಗಿದೆ.

Service	Post	Service Examinations
1	2	3
16. The Karnataka General Service (Dev. Branch)	Gazetted Officers	(1) Community Development Part- I and II (2) Revenue Higher Part I and II (3) Accounts Higher (4) General Law Part-I and II
	Panchayat Development Officers	(1) Community Development Part- I and II (2) Accounts Higher (3) General Law Part-I and II
	Gram Panchayat Secretary and Rural Development Assistant Grade-1, First Division Assistant / Stenographers (Personal Establishment of Development Commissioner)	(1) Community Development Part-I and II (2) Accounts Higher
	Second Division Assistants, Gram Panchayat Secretary Grade-11	(1) Community Development Part-I and II (2) Accounts Lower.

19. ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು:–

1. ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರವನ್ನು ಕಾರ್ಯದರ್ಶಿ ಹಾಗೂ ನಿಯಂತ್ರಕರು, ಇಲಾಖಾ ಪರೀಕ್ಷೆಗಳು ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001 ಈ ವಿಳಾಸಕ್ಕೆ ಮಾಡತಕ್ಕದ್ದು.

2. ಪರೀಕ್ಷೆಗಳ ಸಂಬಂಧದಲ್ಲಿ ಯಾವುದೇ ಮಾಹಿತಿ ಕೋರುವ ಅಭ್ಯರ್ಥಿಗಳು ಮನವಿಯಲ್ಲಿ ಎಲ್ಲಾ ಮಾಹಿತಿ ನೀಡಿ ಅದರೊಂದಿಗೆ ಸಾಕಷ್ಟು ಅಂಚೆ ಚೀಟಿಗಳನ್ನು ಹಚ್ಚಿದ ಸ್ವವಿಳಾಸ ಬರೆದ ಒಂದು ಲಕೋಟೆಯನ್ನು ಲಗತ್ತಿಸಿದರೆ ಆಯೋಗದ ಉತ್ತರವು ಅಡಚಣೆ ಆಗದೇ ಬೇಗ ತಲುಪುವುದು.

3. ಮಾಹಿತಿಗಾಗಿ ಅಭ್ಯರ್ಥಿಗಳು ಆಯೋಗಕ್ಕೆ ಸಲ್ಲಿಸುವ ಮನವಿಗಳಲ್ಲಿ ನೋಂದಣಿ ಸಂಖ್ಯೆ, ಅಧಿವೇಶನ, ವಿಷಯ ಮತ್ತು ಪರೀಕ್ಷಾಕೇಂದ್ರ ಮುಂತಾದ ಸ್ಪಷ್ಟ ವಿವರಗಳನ್ನು ಸೂಚಿಸದಿದ್ದಲ್ಲಿ ಅಂತಹವುಗಳನ್ನು ಪುರಸ್ಕರಿಸಲಾಗುವುದಿಲ್ಲ.

4. ಅಭ್ಯರ್ಥಿಗಳು ಪೊಲೀಸ್ ಅಥವಾ ಇನ್ನಾವುದೇ ಸಮವಸ್ತ್ರವನ್ನು ಧರಿಸಿ ಪರೀಕ್ಷೆ ಬರೆಯುವುದನ್ನು ನಿಷೇಧಿಸಲಾಗಿದೆ.

5. ಅಭ್ಯರ್ಥಿಗಳು ತಮ್ಮ ಸಹ ನೌಕರರನ್ನು/ಇತರರನ್ನು ಕರೆತರುವುದನ್ನು ಮತ್ತು ಪರೀಕ್ಷೆ ನಡೆಯುತ್ತಿರುವಾಗ ಅವರನ್ನು ಭೇಟಿ ಮಾಡಲು ಕೋರುವುದನ್ನು ನಿಷೇಧಿಸಲಾಗಿದೆ.

6. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್ ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ತರುವುದನ್ನು ಮತ್ತು ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

7. ಅಭ್ಯರ್ಥಿಗಳು ತಮಗೆ ಕಾಯ್ದಿರಿಸಿದ ಸ್ಥಳದಲ್ಲಿ ಮಾತ್ರ ಕುಳಿತು ಪರೀಕ್ಷೆ ಬರೆಯತಕ್ಕದ್ದು. ತಪ್ಪಿದಲ್ಲಿ ಅವರ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.

8. **ಅಭ್ಯರ್ಥಿಯು ತನ್ನ ಹುದ್ದೆಗೆ ಸಂಬಂಧಿಸಿದಂತೆ 1974ರ ಕ.ನಾ.ಸೇ (ಸೇವಾ ಮತ್ತು ಕನ್ನಡಭಾಷಾ) ನಿಯಮಾವಳಿ ರೀತ್ಯಾ ಕಡ್ಡಾಯಗೊಳಿಸಿದ ವಿಷಯಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.**

9. **ಯಾವುದೇ ಹುದ್ದೆಗೆ ಕಡ್ಡಾಯಗೊಳಿಸಿದ ವಿಷಯಗಳ ಪೈಕಿ ಈ ಅಧಿಸೂಚನೆಯೊಂದಿಗೆ ಪ್ರಕಟಿಸಿದ ವೇಳಾಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳು ಒಂದೇ ದಿನ, ಒಂದೇ ಸಮಯದಲ್ಲಿ ನಡೆಯುವಂತಿದ್ದರೆ, ಅವುಗಳಲ್ಲಿ ಒಂದಕ್ಕೆ ಮಾತ್ರ ಅರ್ಜಿ ಸಲ್ಲಿಸಿ ಪರೀಕ್ಷೆಗೆ ಹಾಜರಾಗತಕ್ಕದ್ದು.**

10. ಪಠ್ಯ ಕ್ರಮಕ್ಕಾಗಿ ಅಭ್ಯರ್ಥಿಗಳು ಕರ್ನಾಟಕ ನಾಗರಿಕ ಸೇವೆಗಳು (ಸೇವೆ ಮತ್ತು ಕನ್ನಡಭಾಷಾ ಪರೀಕ್ಷೆಗಳು) ನಿಯಮಗಳು, 1974 ಮತ್ತು ಅದಕ್ಕೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗಿರುವ ತಿದ್ದುಪಡಿಗಳನ್ನು ನೋಡಬಹುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:

ಶಾಖೆಗಳು	ದೂರವಾಣಿ ಸಂಖ್ಯೆಗಳು
ಮಾಹಿತಿ ಕೇಂದ್ರ	**080–30574957**
ಇಲಾಖಾ ಪರೀಕ್ಷಾ ಶಾಖೆ–1	**080–30574944**
ಇಲಾಖಾ ಪರೀಕ್ಷಾ ಶಾಖೆ–2	**080–30574945**
ಪ್ರಾಂತೀಯ ಕಛೇರಿ ಮೈಸೂರು	**0821–2545956**
ಪ್ರಾಂತೀಯ ಕಛೇರಿ ಬೆಳಗಾವಿ	**0831–2475345**
ಪ್ರಾಂತೀಯ ಕಛೇರಿ ಗುಲ್ಬರ್ಗಾ	**08472–227944**
ಪ್ರಾಂತೀಯ ಕಛೇರಿ ಶಿವಮೊಗ್ಗ	**08182–228099**
ಸಹಾಯವಾಣಿ	**080–30574913**

20. ದುರ್ವರ್ತನೆ:

ಯಾವುದೇ ಒಬ್ಬ ಅಭ್ಯರ್ಥಿಯು ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಕೃತ್ರಿಮ ದಸ್ತಾವೇಜನ್ನು ಅಥವಾ ಅಕ್ರಮವಾಗಿ ತಿದ್ದಿದ ದಸ್ತಾವೇಜುಗಳನ್ನು ಸಲ್ಲಿಸಿದ ಅಥವಾ ಸರಿಯಲ್ಲದ ಅಥವಾ ಸುಳ್ಳು ವಿವರಣೆಯನ್ನು ನೀಡಿದ ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿದ ಅಥವಾ ಪರೀಕ್ಷೆಯಲ್ಲಿ ಅಕ್ರಮ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿದ ಅಥವಾ ಬೇರೆ ರೀತಿಯಲ್ಲಿ ಇತರೆ ಯಾವುದೇ ಅಕ್ರಮ ಅನುಚಿತ ಮಾರ್ಗವನ್ನನುಸರಿಸಿದ ಅಪರಾಧವನ್ನು ಮಾಡಿರುವುದಾಗಿ ಆಯೋಗಕ್ಕೆ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯನ್ನು ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸುವುದಲ್ಲದೆ (ಎ) ಅಭ್ಯರ್ಥಿಯ ಆಯ್ಕೆಗಾಗಿ ಆಯೋಗದಿಂದ ನಡೆಸಲಾಗುವ ಯಾವುದೇ ಪರೀಕ್ಷೆಗೆ ಪ್ರವೇಶ ನೀಡುವುದಕ್ಕೆ ಅಥವಾ ಯಾವುದೇ ಸಂದರ್ಶನಕ್ಕೆ ಹಾಜರಾಗುವುದಕ್ಕೆ ಖಾಯಂ ಆಗಿ ಅಥವಾ ಒಂದು ನಿರ್ಧಿಷ್ಟ ಅವಧಿಗೆ ಅನರ್ಹಗೊಳಿಸಲಾಗುವುದು ಮತ್ತು (ಬಿ) ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಸಂವೀಕ್ಷಕರು/ಮೇಲ್ವಿಚಾರಕರು ನೀಡುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು ತಪ್ಪಿದಲ್ಲಿ ಅದನ್ನು ದುರ್ವರ್ತನೆಯನ್ನಾಗಿ ಪರಿಗಣಿಸಲಾಗುವುದು ಮತ್ತು ಈ ಬಗ್ಗೆ ಶಿಸ್ತಿನ ಕಾರ್ಯವಿಧಾನಗಳಿಗೆ ಒಳಪಡಿಸಲಾಗುವುದು.

ವಿ. ಬಿ. ಪಾಟೀಲ್,
ಕಾರ್ಯದರ್ಶಿ ಹಾಗೂ ನಿಯಂತ್ರಕರು,
ಇಲಾಖಾ ಪರೀಕ್ಷೆಗಳು,
ಕರ್ನಾಟಕ ಲೋಕಸೇವಾ ಆಯೋಗ.

ಕರ್ನಾಟಕ ಲೋಕಸೇವಾ ಆಯೋಗ," ಉದ್ಯೋಗ ಸೌಧ", ಬೆಂಗಳೂರು–560001.
ಅಧಿಸೂಚನೆ ಸಂಖ್ಯೆ ಇ.ಪ.(1)2088/2011–12/ಪಿಎಸ್‌ಸಿ, ದಿನಾಂಕ:22–03–2012

ಅನುಬಂಧ " ಎ "

2012ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳು

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ

ಕ್ರ. ಸಂ.	ವಾರ	ದಿನಾಂಕ	ವೇಳೆ	ವಿಷಯ
1	**2**	**3**	**4**	**5**
1.	ಶನಿವಾರ	**16–06–2012**	ಬೆಳಿಗ್ಗೆ 10.00 ರಿಂದ 12–00 ಗಂಟೆ ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಅಕೌಂಟ್ಸ್ ಲೋಯರ್ ಜನರಲ್ ಲಾ ಭಾಗ– **II**
2	ಭಾನುವಾರ	**17–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಅಕೌಂಟ್ಸ್ ಹೈಯರ್ ಪತ್ರಿಕೆ–**1** ಅಕೌಂಟ್ಸ್ ಹೈಯರ್ ಪತ್ರಿಕೆ–**2**

ಕ್ರ ಸಂ.	ವಾರ	ದಿನಾಂಕ	ವೇಳೆ	ವಿಷಯ
3.	ಸೋಮವಾರ	**18–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಜನರಲ್ ಲಾ ಭಾಗ– **I** ಪತ್ರಿಕೆ– **1** ಜನರಲ್ ಲಾ ಭಾಗ– **I** ಪತ್ರಿಕೆ– **2**
4.	ಮಂಗಳವಾರ	**19–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮಧ್ಯಾಹ್ನ 2.00 ರಿಂದ ಸಂಜೆ 3.00 ಗಂಟೆ	ಕನ್ನಡ ಪತ್ರಿಕೆ–**1** (ಪುಸ್ತಕಗಳಿಲ್ಲದೆ) ಕನ್ನಡ ಪತ್ರಿಕೆ–**2** (ಪುಸ್ತಕಗಳಿಲ್ಲದೆ)
5.	ಬುಧವಾರ	**20–06–2012**	ಬೆಳಿಗ್ಗೆ 10.00 ರಿಂದ 1.00 ಗಂಟೆ ಮೇಲಿನಂತೆ ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ ಮೇಲಿನಂತೆ	ಇನ್ಶೂರೆನ್ಸ್ ಹೈಯರ್ ಪತ್ರಿಕೆ–**2** (ಪುಸ್ತಕಗಳಿಲ್ಲದೆ) ಪಿ.ಡಬ್ಲ್ಯೂ.ಡಿ ಹೈಯರ್ ಭಾಗ– **I** ಪತ್ರಿಕೆ–**1,** (ಪುಸ್ತಕಗಳಿಲ್ಲದೆ) ಇನ್ಶೂರೆನ್ಸ್ ಲೋಯರ್ ಪತ್ರಿಕೆ–**2** {ಪುಸ್ತಕಗಳಿಲ್ಲದೆ} ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ–**2,**
6	ಗುರುವಾರ	**21–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ ಮೇಲಿನಂತೆ ಮೇಲಿನಂತೆ	ಲೇಬರ್ ಪತ್ರಿಕೆ–**1** ಪ್ರಿಸನ್ಸ್ ಎಕ್ಸೈಸ್ ಮೋಟಾರ್ ವೆಹಿಕಲ್ಸ್ ರೆವಿನ್ಯೂ ಹೈಯರ್ ಭಾಗ– I ಪತ್ರಿಕೆ–**1** ಇನ್ಶೂರೆನ್ಸ್ ಅಡ್ವಾನ್ಸಡ್ ಪತ್ರಿಕೆ–**1** ಲೇಬರ್ ಪತ್ರಿಕೆ–**2** ಇನ್ಶೂರೆನ್ಸ್ ಅಡ್ವಾನ್ಸಡ್ ಪತ್ರಿಕೆ–**2** ರೆವಿನ್ಯೂ ಹೈಯರ್ ಭಾಗ– Iಪತ್ರಿಕೆ–**2.**
7.	ಶುಕ್ರವಾರ	**22–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ ಮೇಲಿನಂತೆ ಮೇಲಿನಂತೆ ಮೇಲಿನಂತೆ	ರೆವಿನ್ಯೂ ಹೈಯರ್ ಭಾಗ– **II** ಪತ್ರಿಕೆ–**1** ರಿಜಿಸ್ಟ್ರೇಷನ್ ಪತ್ರಿಕೆ–**1** ಕಮರ್ಷಿಯಲ್‌ಟ್ಯಾಕ್ಸ್ ಭಾಗ– **I** ಪತ್ರಿಕೆ–**1** ಇನ್ಶೂರೆನ್ಸ್ ಅಡ್ವಾನ್ಸಡ್ ಪತ್ರಿಕೆ–**3** ರೆವಿನ್ಯೂ ಹೈಯರ್ ಭಾಗ– **II** ಪತ್ರಿಕೆ–**2** ರಿಜಿಸ್ಟ್ರೇಷನ್ ಪತ್ರಿಕೆ–**2** ಕಮರ್ಷಿಯಲ್‌ಟ್ಯಾಕ್ಸ್ ಭಾಗ– **I,** ಪತ್ರಿಕೆ–**2** ಇನ್ಶೂರೆನ್ಸ್ ಹೈಯರ್ ಪತ್ರಿಕೆ–**1**
8.	ಶನಿವಾರ	**23–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಪೊಲೀಸ್ ಮ್ಯಾನ್ಯುಯಲ್ ಕೋ–ಆಪರೇಷನ್ ಪತ್ರಿಕೆ–**1** ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ ಮಾರ್ಕೆಟಿಂಗ್ ಪತ್ರಿಕೆ–**1** ಮೈನಿಂಗ್ ಭಾಗ– **I** ರೆವಿನ್ಯೂ ಲೋಯರ್ ಪತ್ರಿಕೆ–**1** ಕಮರ್ಷಿಯಲ್ ಟ್ಯಾಕ್ಸ್ ಭಾಗ– **I,** ಪತ್ರಿಕೆ–**3** ಮತ್ತು – ಕೋ–ಆಪರೇಷನ್ ಪತ್ರಿಕೆ–**2** (ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ)

ಕ್ರ ಸಂ.	ವಾರ	ದಿನಾಂಕ	ವೇಳೆ	ವಿಷಯ
			ಮೇಲಿನಂತೆ	ಇನ್ಸೂರೆನ್ಸ್ ಹೈಯರ್ ಪತ್ರಿಕೆ**–3**
			ಮೇಲಿನಂತೆ	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್
			ಮೇಲಿನಂತೆ	ಮಾರ್ಕೆಟಿಂಗ್ ಪತ್ರಿಕೆ**–2**
			ಮೇಲಿನಂತೆ	ಮೈನಿಂಗ್ ಭಾಗ– **II**
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ**–2**
9.	ಭಾನುವಾರ	**24–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಸಿರಿಕಲ್ಚರ್ ಪತ್ರಿಕೆ**–1**
			ಮೇಲಿನಂತೆ	ಕಮ್ಯೂನಿಟಿ ಡೆವಲಪ್‌ಮೆಂಟ್ ಭಾಗ– **I**
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ**–3**
			ಮೇಲಿನಂತೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ**–II** ಪತ್ರಿಕೆ**–1**
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ**–1**
			ಮೇಲಿನಂತೆ	ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ ಪತ್ರಿಕೆ**–1**
			ಮೇಲಿನಂತೆ	ಪೋರ್ಟ್ಸ್ ಹೈಯರ್
			ಮೇಲಿನಂತೆ	ಇನ್ಸೂರೆನ್ಸ್ ಲೋಯರ್ ಪತ್ರಿಕೆ**–1**
			ಮೇಲಿನಂತೆ	ಯೂಥ್ ಸರ್ವೀಸಸ್ ಮ್ಯಾನ್ಯುಯಲ್
			ಮಧ್ಯಾಹ್ನ 2.00ರ ರಿಂದ ಸಂಜೆ 4.00 ಗಂಟೆ	ಸಿರಿಕಲ್ಚರ್ ಪತ್ರಿಕೆ**–2**
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ**–I,**ಪತ್ರಿಕೆ**–2**
			ಮೇಲಿನಂತೆ	ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ ಪತ್ರಿಕೆ**–2**
			ಮೇಲಿನಂತೆ	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ**–II**
			ಮೇಲಿನಂತೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ**–II** ಪತ್ರಿಕೆ**–2**
			ಮೇಲಿನಂತೆ	ಪೋರ್ಟ್ಸ್ ಲೋಯರ್
10	ಸೋಮವಾರ	**25–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ ಪತ್ರಿಕೆ–1
			ಮೇಲಿನಂತೆ	ಇನ್ಸೂರೆನ್ಸ್ ಲೋಯರ್ ಪತ್ರಿಕೆ**–3**
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ**–II,**ಪತ್ರಿಕೆ**–1**
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ**–1**
			ಮೇಲಿನಂತೆ	ಆಕ್ಟ್ಸ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವೆಲಪ್‌ಮೆಂಟ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ ಪತ್ರಿಕೆ–2
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ**–II,** ಪತ್ರಿಕೆ**–2**
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ**–2**
			ಮೇಲಿನಂತೆ	ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ–1

ಕ್ರ ಸಂ.	ವಾರ	ದಿನಾಂಕ	ವೇಳೆ	ವಿಷಯ
11	ಮಂಗಳವಾರ	**26–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ–1
			ಮೇಲಿನಂತೆ	ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ– I
			ಮೇಲಿನಂತೆ	ಫಾರೆಸ್ಟ್ ಪತ್ರಿಕೆ–1
			ಮೇಲಿನಂತೆ	ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಶನ್ ಪತ್ರಿಕೆ–2
			ಮೇಲಿನಂತೆ	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ–1
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಹೋಂ ಗಾರ್ಡ್ಸ್ ಮ್ಯಾನ್ಯುಯಲ್
			ಮೇಲಿನಂತೆ	ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ– II
			ಮೇಲಿನಂತೆ	ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ–2
			ಮೇಲಿನಂತೆ	ಫಾರೆಸ್ಟ್ ಪತ್ರಿಕೆ–2
			ಮೇಲಿನಂತೆ	ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ–3
			ಮೇಲಿನಂತೆ	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ–2
12	ಬುಧವಾರ	**27–06–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ–1
			ಮೇಲಿನಂತೆ	ಕರ್ನಾಟಕ ಕನ್‌ಸ್ಯೂಮರ್ ಪ್ರೋಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್, ಪತ್ರಿಕೆ–**1**
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ–**2**
			ಮೇಲಿನಂತೆ	ಕರ್ನಾಟಕ ಕನ್‌ಸ್ಯೂಮರ್ ಪ್ರೋಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್, ಪತ್ರಿಕೆ–**2**

ವಿ.ಬಿ. ಪಾಟೀಲ್,
ಕಾರ್ಯದರ್ಶಿ ಹಾಗೂ ನಿಯಂತ್ರಕರು,
ಇಲಾಖಾ ಪರೀಕ್ಷೆಗಳು,
ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು.

ಕರ್ನಾಟಕ ಲೋಕಸೇವಾ ಆಯೋಗ,"ಉದ್ಯೋಗ ಸೌಧ", ಬೆಂಗಳೂರು–560001.

ಅಧಿಸೂಚನೆ ಸಂಖ್ಯೆ ಇ.ಪ.(1)2088/2011–12/ಪಿಎಸ್‌ಸಿ, ದಿನಾಂಕ:22–03–2012

ಅನುಬಂಧ– " ಬಿ "

2012ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳು

ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ.

ಕ್ರ.ಸಂ	ವಾರ	ದಿನಾಂಕ	ವೇಳೆ	ವಿಷಯ
1	**2**	**3**	**4**	**5**
1.	ಶನಿವಾರ	**30–06–2012**	ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ	ಎಸ್.ಎ.ಎಸ್.ಭಾಗ– **I**, ಪತ್ರಿಕೆ–**1** ಮತ್ತು ಎಲೆಕ್ಟ್ರಿಸಿಟಿ ಆಡಿಟ್ ಅಂಡ್ ಅಕೌಂಟ್ಸ್‌ಲಾಸ್ (ಹೈಯರ್) ಭಾಗ– **II** (ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ) (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– **I** ಪತ್ರಿಕೆ–**1** (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಕನ್ನಡ ಪತ್ರಿಕೆ–**1**(ಐಎಎಸ್,ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ)
			ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.00 ಗಂಟೆ	ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್
			ಮೇಲಿನಂತೆ	ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಎಕ್ಸಾಮಿನೇಷನ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಎಸ್.ಎ.ಎಸ್.ಭಾಗ– **I** ಪತ್ರಿಕೆ–**2** (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– **I** ಪತ್ರಿಕೆ–**2** (ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ	ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ– **II**
			ಮೇಲಿನಂತೆ	ಟ್ರಾನ್ಸ್‌ಲೇಶನ್ ಟೆಸ್ಟ್ (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಕನ್ನಡ ಪತ್ರಿಕೆ–**2** (ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸಕಗಳಿಲ್ಲದೆ)
2.	ಭಾನುವಾರ	**01–07–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ– **I** ಪತ್ರಿಕೆ–**3**
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– **I** ಪತ್ರಿಕೆ–**3**
			ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ	ಎಸ್.ಎ.ಎಸ್. ಭಾಗ– **II** ಪತ್ರಿಕೆ–**1** (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– **II** ಪತ್ರಿಕೆ–**1** (ಎಲಿಮೆಂಟರಿ ಬುಕ್ ಕೀಪಿಂಗ್)
3	ಸೋಮವಾರ	**02–07–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ– **II** ಪತ್ರಿಕೆ–**2**
			ಮೇಲಿನಂತೆ	ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ–**1**
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– **II** ಪತ್ರಿಕೆ–**2** (ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ	ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ–**2**
			ಮೇಲಿನಂತೆ	ಎಸ್.ಎ.ಎಸ್ ಭಾಗ– **II** ಪತ್ರಿಕೆ–**3**
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– **II** ಪತ್ರಿಕೆ–**3**
4.	ಮಂಗಳವಾರ	**03–07–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ– **III** ಪತ್ರಿಕೆ–**1**
			ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ	ಎಸ್.ಎ.ಎಸ್. ಭಾಗ– **III** ಪತ್ರಿಕೆ–**2** (ಪುಸ್ತಕಗಳಿಲ್ಲದೆ)

ಕ್ರ.ಸಂ	ವಾರ	ದಿನಾಂಕ	ವೇಳೆ	ವಿಷಯ
5.	ಬುಧವಾರ	**04–07–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ ಮೇಲಿನಂತೆ	ಎಸ್.ಎ.ಎಸ್. ಭಾಗ– **III** ಪತ್ರಿಕೆ–**3** ಎಸ್.ಎ.ಎಸ್. ಭಾಗ– **III** ಪತ್ರಿಕೆ–**4** (ಪುಸ್ತಕಗಳಿಲ್ಲದೆ) ಎಲೆಕ್ಟ್ರಿಸಿಟಿ(ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಲೋಯರ್ ಪರೀಕ್ಷೆ
6.	ಗುರುವಾರ	**05–07–2012**	ಬೆಳಿಗ್ಗೆ 10.00 ರಿಂದ 12.00 ಗಂಟೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮೇಲಿನಂತೆ ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ ಮೇಲಿನಂತೆ	ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಹೈಯರ್ ಪರೀಕ್ಷೆ ಭಾಗ– **I** ಎಸ್.ಎ.ಎಸ್ ಭಾಗ– **III** ಪತ್ರಿಕೆ–**5** ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ– **I** ಪತ್ರಿಕೆ–**1** ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್ ಕರ್ನಾಟಕ ಲೋಕಸೇವಾ ಆಯೋಗ ಮ್ಯಾನ್ಯುಯಲ್ ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ– **I** ಪತ್ರಿಕೆ–**2** ಕರ್ನಾಟಕ ಲೋಕಸೇವಾ ಆಯೋಗ ರಿಕ್ರೂಟ್‌ಮೆಂಟ್ ರೂಲ್ಸ್

ವಿ.ಬಿ. ಪಾಟೀಲ್,
ಕಾರ್ಯದರ್ಶಿ ಹಾಗೂ ನಿಯಂತ್ರಕರು, ಇಲಾಖಾ ಪರೀಕ್ಷೆಗಳು,
ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು.

ಪಿ.ಆರ್. 60

FORM-1

(See rule 9)

Department of Police

Office of the Commandant, IInd Bn, K.S.R.P. Belgaum

NOTIFICATION Date : 21-03-2012

Sir SOMALING CHANDRAPPA TUBAKAD Working as Police Constable Department of/Office of the Commandant IInd BN K.S.R.P., Belgaum is permitted to change is name to SOMALING CHANDRAPPA TUBAKI.

S.H. NAIK,
Commandant,
IInd Bn, K.S.R.P. Belgaum

P.D. 44

ನಮೂನೆ–1

(ನಿಯಮ–9)

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ

ಅಧಿಸೂಚನೆ ದಿನಾಂಕ 01–03–2012

ಶ್ರೀ **ಸಲ್ಮಾಖಾತೂನ ತಂ. ಅಬ್ದುಲ್ ಕರೀಮ್ ಬಗಲಿ** ಮುಖ್ಯಗುರುಮಾತೆಯವರು ಸರಕಾರಿ ಉರ್ದು ಗಂಡು ಮಕ್ಕಳ ಪ್ರಾಥಮಿಕ ಶಾಲೆ ಕಲಾದಗಿ ತಾಲ್ಲೂಕು ಮತ್ತು ಜಿಲ್ಲೆ ಬಾಗಲಕೋಟೆ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು ಶ್ರೀ **ಸಲ್ಮಾಖಾತೂನ ಗಂ. ಮೆಹಬೂಬಸಾಬ ಮುಲ್ಲಾ** ಎಂದು ಬದಲಾವಣೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಉಪ ನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಬಾಗಲಕೋಟೆ

ಪಿ.ಡಿ. 45

IN THE COURT OF THE IV ADDL. CITY CIVIL JUDGE MAYOHALL AT BANGALORE (CCH-21)

P & S.C. No. 25001/2012, HG : 25-05-2012

PETITIONER :

Sandhya L. Kalkunte, D/o Late Shri N. Jayasimha, Aged about 45 years,

R/o 617, 13th Cross Road, Domlur Layout, Bangalore-560 071.

V/s

RESPONDENT :

NIL

PUBLIC NOTICE

Notice is hereby given that a petition has been made to this Court Under Section 276 of the Indian Succession Act, for grant of Probate Certificate to the estate of the deceased N. Jayasimha (Narasimhamurti Jayasimha) died on 24-11-2010 and Late. Smt. Mythili Jayasimha died on 16-04-2011 at Bangalore City.

Be it known that No Caveat has been entered and the said petition is posted for hearing on 25-05-2012 at 11-00 'O clock. Any person's claiming to have any interest may come and participate in the proceedings before grant of Probate Certificate.

SCHEDULE (A)

Residential property bearing No. 617, 13th Cross, Domlur Layout, Bangalore-560 071.

SCHEDULE (B)

Savings Bank Accounts of both the parents

Savings Bank Joint Accounts of both the parents

Fixed Deposits of both parents and joint accounts.

Post Office N.S. Certificates/Bonds in the name of the Petitioner's parents.

Bonds/Mutual Funds of both the parents.

Maruti 800 Car.

Locker in the name of petitioner's mother

Shares in the name of petitioner's mother & Father.

Given under my hand and seal of the Court, this the 27th day of March 2012.

By Order of the Court,
Assistant Registrar,
City Civil Court, Mayo Hall, Bangalore

P.D. 37

FORM - IV

(See rule 12)

NOTICE

It is hereby notified that the undersigned has changed his name from KAREPPA. BHARAMAPPA. HOLER to KUBENDRA BHARAMAPPA MANNIKERI.

P.D. 40 KAREPPA. BHARAMAPPA. HOLER

FORM-IV

(See rule 12)

NOTICE

It is hereby notified that the undersigned has changed her name from MANGALAGIRI NAGALAKSHMAMMA to M.NAGALAKSHMI.

P.D. 41 MANGALAGIRI NAGALAKSHMAMMA